ನೌಕರಿ ನೀಡಿರುವ ಸಂಖ್ಯೆ 6504, ಬಾಕಿ ಇರುವ ಅರ್ಜಿಗಳ ಸಂಖ್ಯೆ 1949

ಇ) ಚಿಕ್ಕ ಮಗು ಇದ್ದರೆ ಈ ಹಿಂದೆ ಇದ್ದಂತೆ ಆತ ವಯಸ್ಸಿಗೆ ಬಂದ ಒಂದು ವರ್ಷದಲ್ಲಿ ಅರ್ಜಿ ಹಾಕಿಕೊಂಡರೆ ನೌಕರಿ ಕೊಡುತ್ತಿದ್ದುದ್ದನ್ನು ಈಗ ನಿಲ್ಲಿಸಿರುವುದಕ್ಕೆ ಕಾರಣಗಳೇನು,

ಮೃತ ನೌಕರರ ಅವಲಂಬಿತರು ಅಪ್ರಾಪ್ತ ವಯಸ್ಕರಾಗಿದ್ದ ಸಂದರ್ಭದಲ್ಲಿ ಅವರು ಪ್ರಾಪ್ತ ವಯಸ್ಕರಾದ ನಂತರ ಒಂದು ವರ್ಷದ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಲು ಮೇಲ್ಕಂಡ ನಿಯಮಾವಳಿಯಲ್ಲಿ ಅವಕಾಶವಿತ್ತು ಈ ನಿಯಮಾವಳಿಯಲ್ಲಿನ ಕೆಲವು ನಿಯಮಗಳನ್ನು ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 6-1-1997 ರಂದು ನೀಡಿರುವ ತನ್ನ ಆದೇಶದಲ್ಲಿ ಅಪ್ರಾಪ್ತ ವಯಸ್ಕರು ಪ್ರಾಪ್ತ ವಯಸ್ಕರಾದ ನಂತರ ಸಲ್ಲಿಸಿರುವ ಅರ್ಜಿಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನದನ್ವಯ ಮೇಲ್ಕಂಡ ನಿಯಮಗಳಿಗೆ ತಿದ್ದುಪಡಿಯನ್ನು ಮಾಡಲಾಗಿದೆ ಈ ತಿದ್ದುಪಡಿಯನ್ವಯ ಮೃತ ನೌಕರನ ಅವಲಂಬಿತರು ನೌಕರನು ಮೃತನಾದ ದಿನಾಂಕದಂದು ಅಪ್ರಾಪ್ತ ವಯಸ್ಕರಾಗಿದ್ದಲ್ಲಿ, ಒಂದು ವರ್ಷದೊಳಗೆ ಪ್ರಾಪ್ತ ವಯಸ್ಕರಾಗಬೇಕು ಮತ್ತು ಆನಂತರ ಒಂದು ವರ್ಷದೊಳಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಬೇಕು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1153(1509)**
ಸದಸ್ಯರ ಹೆಸರು **ಶ್ರಿ. ರಾಜೇಂದ್ರನ್ ಎಸ್ (ಕೆ ಜಿ ಎಫ್)**
ಉತ್ತರಿಸುವವರು **ಶ್ರೀ ಹೆಚ್ ಡಿ ಕುಮಾರಸ್ವಾಮಿ**
(ಮುಖ್ಯಮಂತ್ರಿಗಳು)

1) ಕೆ ಜಿ ಎಫ್ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಸರ್ವೇಕ್ಷಣಾ ಕಾರ್ಯವನ್ನು ಯಾವಾಗ ವಹಿಸಲಾಯಿತು?

ಕೆ ಜಿ ಎಫ್ ಪಟ್ಟಣದ ಮುನಿಸಿಪಲ್ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಸರ್ವೆ ಕಾರ್ಯವನ್ನು ದಿನಾಂಕ 3 10 06 ರಂದು ವಹಿಸಲಾಗಿತ್ತು

2) ಸದರಿ ಸರ್ವೆ ಕಾರ್ಯವು ಪೂರ್ಣಗೊಂಡಿದೆಯೇ ಅಥವಾ ಇಲ್ಲವೇ?

2007ರ ಮಾರ್ಚ್ ಮೊದಲ ವಾರದಲ್ಲಿ ಪೂರ್ಣಗೊಂಡಿರುತ್ತದೆ

3) ಪೂರ್ಣಗೊಂಡಿದ್ದಲ್ಲಿ ಈ ಸರ್ವೇಕ್ಷಣಾ ವರದಿಯನ್ನು ಸರ್ಕಾರವು ಸ್ವೀಕರಿಸಿದೆಯೇ?

ವರದಿಯು ಇನ್ನು ಸರ್ಕಾರಕ್ಕೆ ಬಂದಿರುವುದಿಲ್ಲ

4) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಯೋಜನೆಯ ಅಂದಾಜು ವರದಿಯನ್ನು ತಯಾರಿಸಲಾಗುತ್ತಿದೆ

5) ಈ ಸರ್ವೇ ಕಾರ್ಯಕ್ಕೆ ಈವರೆಗೂ ಖರ್ಚು ಮಾಡಿದ ಹಣ (ವಿವರಗಳನ್ನು ನೀಡುವುದು)

ಸರ್ವೇ ಕಾರ್ಯಕ್ಕಾಗಿ ಕೆ ಜಿ ಎಫ್ ನಗರಸಭೆಯಿಂದ ರೂ 9 00 ಲಕ್ಷಗಳನ್ನು ಮಂಡಳಿಯು ಸ್ವೀಕರಿಸಿರುತ್ತದೆ ಕರಾರಿನಲ್ಲಿ ನಮೂದಿಸಿರುವ ನಿಬಂಧನೆಯಂತೆ ಸರ್ವೇ ಕಾರ್ಯದ ವರದಿ ಬಂದ ನಂತರವೇ ಹಣ ಪಾವತಿಸಬೇಕಾದ ಕಾರಣ ಈವರೆಗೆ ಸರ್ವೆ ಕಾರ್ಯಕ್ಕೆ ಹಣವನ್ನು ಪಾವತಿ ಮಾಡಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1156(1488)**

ಸದಸ್ಯರ ಹೆಸರು **ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)**

ಉತ್ತರಿಸುವ ಸಚಿವರು **ಡಾ ಹೆಚ್ ಎಸ್ ಮಹದೇವ ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು)**

ಅ) ಮಕ್ಕಳ ಸಾಹಿತ್ಯಕ್ಕಾಗಿ ಸರ್ಕಾರ ಹಾಲಿ ನೀಡುತ್ತಿರುವ ಪ್ರೋತ್ಸಾಹ ಮತ್ತು ಸಹಾಯಗಳೇನು ,

ಮಕ್ಕಳ ಸಾಹಿತ್ಯಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನಕ್ಕೊಳಪಡುವ ಸ್ವಾಯತ್ತ ಸಂಸ್ಥೆಗಳಾದ ಕನ್ನಡ ಪುಸ್ತಾಧಿಕಾರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಮಕ್ಕಳ ಸಾಹಿತ್ಯ ಪ್ರಕಟಣೆ, ಪ್ರಸಾರ ಮತ್ತು ಧನಸಹಾಯ ನೆರವು ನೀಡಿ ಪ್ರೋತ್ಸಾಹಿಸಲಾಗುತ್ತದೆ

ಆ) ಕಳೆದ 5 ವರ್ಷಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ಸರ್ಕಾರದ ವತಿಯಿಂದ ಏರ್ಪಡಿಸಲಾಗಿದ್ದ ಕಾರ್ಯಕ್ರಮಗಳಾವುವು ,

1 <u>ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ</u>

<u>ಅ) ವಿಚಾರ ಸಂಕಿರಣ</u>

2001 ರಲ್ಲಿ ಮಕ್ಕಳ ಸಾಹಿತ್ಯ ಚಿಂತನೆ ಮತ್ತು ಶಿಶು ಸಂಗಮೇಶ ಸ್ಮರಣೆ ವಿಚಾರ ಸಂಕಿರಣವನ್ನು ಬಿಜಾಪುರದಲ್ಲಿ ನಡೆಸಲಾಗಿದೆ

<u>ಆ ಗ್ರಂಥಗಳ ಪ್ರಕಟಣೆ</u>

- 2001–02ರಲ್ಲಿ ಶತಮಾನದ ಮಕ್ಕಳ ಸಾಹಿತ್ಯ ಕೃತಿಯನ್ನು ಎನ್ ಎಸ್ ರಘುನಾಥ್ ಅವರಿಂದ ಸಂಪಾದಿಸಿ ಪ್ರಕಟಿಸಲಾಗಿದೆ
- 2004ರಲ್ಲಿ 'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ' ಎಂಬ ಡಾ ನಿರುಪಮಾ ಅವರು ರಚಿಸಿದ ಗ್ರಂಥ ಪ್ರಕಟಿಸಲಾಗಿದೆ